ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ 208 ವರ್ಗಾವಣೆ 2017-18 ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ:20.06.2017

## ಸುತ್ತೋಲೆ

ವಿಷಯ: 2017-18ನೇ ಸಾಲಿನ ಕಾಲೇಜು ಶಿಕ್ಷಣ ಇಲಾಖೆಯ ಬೋಧಕ/ಗ್ರಂಥಪಾಲಕರು/ದೈಹಿಕ ಶಿಕ್ಷಣ ನಿರ್ದೇಶಕರುಗಳ ಕೋರಿಕೆ ವರ್ಗಾವಣೆಯ ಸಾಮಾನ್ಯ ಪ್ರಕರಣಗಳ ಕೌನ್ಸಲಿಂಗ್ ಬಗ್ಗೆ.

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ:SAMVYASHAE 69 SHASANA 2012, ದಿನಾಂಕ:08.05.2013.
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 154 ಡಿಸಿಇ 2013 ದಿನಾಂಕ:01.07.2014.
3. ಕಛೇರಿಯ ಸಮ ಸಂಖ್ಯೆ ಸುತ್ತೋಲೆ ದಿನಾಂಕ:07.06.2017 ಮತ್ತು 14.06.2017.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(3)ರ ಸುತ್ತೋಲೆಗಳಲ್ಲಿ ಪ್ರಕಟಿಸಲಾಗಿರುವ ತಾತ್ಕಾಲಿಕ ಜೇಷ್ಠತಾ ಪಟ್ಟಿಗೆ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿದ್ದು, ವರ್ಗಾವಣೆಗೆ ಈ ಕೆಳಕಂಡ ಅಂಶಗಳನ್ನು ಪರಿಗಣಿಸಿ, ಕೋರಿಕೆ ವರ್ಗಾವಣೆಯ ಅರ್ಜಿಗಳಲ್ಲಿ ಸಾಮಾನ್ಯ ಪ್ರಕರಣಗಳ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಹಾಗೂ ಲಭ್ಯವಿರುವ ಖಾಲಿಹುದ್ದೆಗಳ ಅಂತಿಮ ಪಟ್ಟಿಯನ್ನು ಈ ಮೂಲಕ ಪ್ರಕಟಿಸಲಾಗಿದೆ.

ಸದರಿ ಪಟ್ಟಿಯನುಸಾರ ಅರ್ಹತೆ ಹೊಂದಿರುವ ಸಿಬ್ಬಂದಿಗಳು **ಈ ಕೆಳಕಂಡ ವೇಳಾಪಟ್ಟಿಯನುಸಾರವಾಗಿ, ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು** ಇಲ್ಲಿನ ಸಭಾಂಗಣದಲ್ಲಿ **ಬೆಳಗ್ಗೆ 10.30ಗಂಟೆಗೆ** ವರ್ಗಾವಣೆ ಕೌನ್ಸಲಿಂಗ್‌ಗೆ ತಪ್ಪದೆ ಹಾಜರಾಗತಕ್ಕದ್ದು.

**ವರ್ಗಾವಣೆ ಕೌನ್ಸೆಲಿಂಗ್‌ನಲ್ಲಿ ಅನುಸರಿಸಲಾಗುವ ಮಾರ್ಗಸೂಚಿಗಳು:**

1. ಪತಿ/ಪತ್ನಿ ಪ್ರಕರಣಗಳನ್ನು ಹೊರತುಪಡಿಸಿದಂತೆ ಇನ್ನಿತರ ವಿಶೇಷ ಪ್ರಕರಣಗಳಲ್ಲಿ ಗರಿಷ್ಠ ಮಿತಿಗಿಂತ ಕಡಿಮೆ ವರ್ಗಾವಣೆಗಳಾಗಿದ್ದು, ಗರಿಷ್ಠ ಮಿತಿ ಮತ್ತು ಆಗಿರುವ ವರ್ಗಾವಣೆಗಳ ವ್ಯತ್ಯಾಸವನ್ನು ಮಾಡಬಹುದಾದ ಸಾಮಾನ್ಯ ಪ್ರಕರಣಗಳಿಗೆ ಸೇರಿಸಿಕೊಳ್ಳಲಾಗಿದೆ.

2. 371 ಜೆ ರಡಿಯಲ್ಲಿ ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದ ರಚನೆಯ ಸಂದರ್ಭದಲ್ಲಿ ರಾಜಧಾನಿ ಪ್ರದೇಶವಾದ ಬೆಂಗಳೂರಿನಲ್ಲಿ ಶೇ.8ರಷ್ಟು ಹುದ್ದೆಗಳನ್ನು ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದಕ್ಕೆ ಮೀಸಲಿರಿಸಿದ್ದು ಸದರಿ ಹುದ್ದೆಗಳು ಖಾಲಿ ಇಲ್ಲದ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳನ್ನು ಸ್ಥಳಾಂತರಿಸಿ ಹೈದ್ರಾಬಾದ್ ಕರ್ನಾಟಕ ಸ್ಥಳೀಯ ವೃಂದದ ಸಿಬ್ಬಂದಿಗಳನ್ನು ಸದರಿ ಹುದ್ದೆಗಳಲ್ಲಿ ನಿಯುಕ್ತಿಗೊಳಿಸಲು ಕ್ರಮ ಕೈಗೊಳ್ಳಲಾಗಿತ್ತು. ಆದರೆ ಕೆಎಟಿ ತಡೆಯಾಜ್ಞೆ ಸ್ವೀಕೃತವಾದ ಕಾರಣ ಆದೇಶ ಅನುಷ್ಠಾನಗೊಳಿಸಲಾಗಿರುವುದಿಲ್ಲ. 2015-16, 2016-17 ನೇ ಸಾಲಿನ ವರ್ಗಾವಣೆಗಳಲ್ಲಿ ಸದರಿ 8% ಹುದ್ದೆಯನ್ನು ಕೌನ್ಸಲಿಂಗ್‌ನಲ್ಲಿ ಪ್ರದರ್ಶಿಸಲಾಗಿರುವುದಿಲ್ಲ. ಅದರಂತೆ ಈ ಸಾಲಿನಲ್ಲಿಯೂ ಖಾಲಿ ಹುದ್ದೆಗಳಲ್ಲಿ ಸದರಿ 8% ಹುದ್ದೆಗಳನ್ನು ಕೌನ್ಸೆಲಿಂಗ್‌ನಲ್ಲಿ ಪ್ರದರ್ಶಿಸಲಾಗುವುದಿಲ್ಲ.

3. ಈಗಾಗಲೇ ಮಾಡಲಾಗಿರುವ ವರ್ಗಾವಣೆಗಳನ್ನು ಹೊರತುಪಡಿಸಿ ಮಾಡಬಹುದಾದ ಕೋರಿಕೆ ವರ್ಗಾವಣೆಗಳನ್ನು ವಲಯವಾರು ಹಂಚಿಕೆ ಮಾಡಿದ್ದು, ವಿವರಗಳು ಈ ಕೆಳಗಿನಂತಿವೆ:

| ಕ್ರ. ಸಂ. | ವಲಯ | ಬೋಧಕರು ರಾಜ್ಯ ವಂದ | ಬೋಧಕರು ಹೈ-ಕ ವೃಂದ | ಗ್ರಂಥಪಾಲರು ರಾಜ್ಯ ವಂದ | ಗ್ರಂಥಪಾಲಕರು ಹೈ-ಕ ವೃಂದ | ದೈ.ಶಿ.ನಿ ರಾಜ್ಯ ವಂದ | ದೈ.ಶಿ.ನಿ ಹೈ-ಕ ವೃಂದ |
|---|---|---|---|---|---|---|---|
| 1 | ಎ ವಲಯ | 70 | 10 | 4 | 0 | 4 | 0 |
| 2 | ಬಿ ವಲಯ | 70 | 10 | 4 | 0 | 4 | 0 |
| 3 | ಸಿ ವಲಯ | 70 | 10 | 4 | 0 | 4 | 0 |
| | ಒಟ್ಟು | 210 | 30 | 12 | 0 | 12 | 0 |

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ವಲಯವಾರು ಗರಿಷ್ಠ ವರ್ಗಾವಣೆಗಳನ್ನು ಮಾಡಲಾಗುವುದು. ಅದರನ್ವಯ 1:4 ಪ್ರಮಾಣದಲ್ಲಿ ಕೋರಿಕೆ ವರ್ಗಾವಣೆ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿದೆ.

4. ವರ್ಗಾವಣೆಯ ಕೌನ್ಸೆಲಿಂಗ್ ವೇಳಾಪಟ್ಟಿ ಈ ಕೆಳಗಿನಂತಿರುತ್ತದೆ:

| ಕ್ರ.ಸಂ | ವಿವರಗಳು | ದಿನಾಂಕ |
|---|---|---|
| 1 | ಸಾಮಾನ್ಯ ಪ್ರಕರಣಗಳು<br>1. ಸಿ ವಲಯದ ರಾಜ್ಯವ್ಯಾಪಿ ಉಳಿಕೆ ವೃಂದದ ಬೋಧಕರು.<br>2. ಬಿ ವಲಯದ ರಾಜ್ಯ ವ್ಯಾಪಿ ಉಳಿಕೆ ವೃಂದದ ಬೋಧಕರು. | 23/06/2017 |
| 2 | ಸಾಮಾನ್ಯ ಪ್ರಕರಣಗಳು<br>1. ಎ ವಲಯದ ರಾಜ್ಯ ವ್ಯಾಪಿ ಉಳಿಕೆ ವೃಂದದ ಬೋಧಕರು.<br>2. ಎ, ಬಿ, ಸಿ ವಲಯಗಳ (ಹೈದ್ರಾಬಾದ್ ಕರ್ನಾಟಕ) ಸ್ಥಳೀಯ ವೃಂದದ ಬೋಧಕರು.<br>3. ಎ, ಬಿ, ಸಿ ವಲಯಗಳ ರಾಜ್ಯ ವ್ಯಾಪಿ ಉಳಿಕೆ ವೃಂದಗಳ ದೈ.ಶಿ.ನಿರ್ದೇಶಕರು ಮತ್ತು ಗ್ರಂಥಪಾಲಕರು . | 24/06/2017 |

**<u>ಸೂಚನೆ:</u>**

1. **ಕೌನ್ಸಿಲಿಂಗ್‌ಗೆ ಆಹ್ವಾನಿಸಲಾಗಿರುವ ಅಭ್ಯರ್ಥಿಗಳು ಮಾತ್ರವೇ ಸ್ಥಳದಲ್ಲಿ ಹಾಜರಿರತಕ್ಕದ್ದು.**
2. **ಎರಡು ವರ್ಷದೊಳಗಿನ ಮಕ್ಕಳನ್ನು ಹೊಂದಿರುವ ಸಿಬ್ಬಂದಿಗಳಿಗೆ ಮಾತ್ರ ಜೊತೆಗೆ ಒಬ್ಬರನ್ನು ಕೌನ್ಸಿಲಿಂಗ್ ಸ್ಥಳದಲ್ಲಿ ಕರೆತರಲು ಅವಕಾಶ ನೀಡಿದೆ.**

***(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)***

Sd/-
**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

**<u>ಇವರಿಗೆ:</u>**

1. ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು/ಪ್ರಭಾರಿ ಪ್ರಾಂಶುಪಾಲರುಗಳಿಗೆ-ತುರ್ತು ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಅಗತ್ಯ ಕ್ರಮಕ್ಕಾಗಿ.
4. ಪ್ರಾಂಶುಪಾಲರು, ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು – ಮಾಹಿತಿ ಹಾಗೂ ಅಗತ್ಯಕ್ರಮಕ್ಕಾಗಿ.
5. ಕಛೇರಿ ಪ್ರತಿ.

*circular transfer 17-18*